ಬೀಳಗಿ ಕ್ಷೇತ್ರದಲ್ಲಿ ಹಳ್ಳಿಗಳ ರಸ್ತೆಯ ಡಾಂಬರೀಕರಣ

204 (472) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೀಳಗಿ ಕ್ಷೇತ್ರದಲ್ಲಿ ಬಾಲಕೋಟಿ- ನಿಪ್ಪಾಣಿ ರಸ್ತೆಯ ಮೇಲೆ ಬರುವ ಹಳ್ಳಿಗಳಾದ ಅನಗವಾಡಿಯಿಂದ ಆಲಗುಂಡಿವರೆಗೆ ಕಳೆದ 10- 15 ವರ್ಷಗಳಿಂದಲೂ ಮರು ಡಾಂಬರೀಕರಣದ ಕೆಲಸ ಕೈಗೊಳ್ಳದಿರಲು ಕಾರಣಗಳೇನು?

ಆ) ಅದೇ ರೀತಿ ಬೀಳಗಿ - ಜಮಖಂಡಿ ರಸ್ತೆ ಮೇಲೆ ಬರುವ ಹಳ್ಳಿಗಳಾದ ಯಡಹಳ್ಳಿ ಅವಲಝರಿ ಗನಿ - ಕೊನ್ನೂರ - ಹವ್ವಾಳ ಕ್ರಾಸ್‌ವರೆಗೆ ಕಳೆ 15-20 ವರ್ಷಗಳಿಂದ ಯಾವಾಗಲಾದರೂ ಮರು ಡಾಂಬರೀಕರಣದ ಕೆಲಸ ಕೈಗೊಳ್ಳದಿರಲು ಕಾರಣಗಳೇನು?

ಇ) 1998-99 ರಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಮರು ಡಾಂಬರೀಕರಣ ಮಾಡಲಾಗುವುದೇ?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ರಸ್ತೆಯ ಮೇಲೆ 30.00 ಲಕ್ಷ ರೂ. ಕಾರ್ಯಕ್ರಮದ ಅಡಿಯಲ್ಲಿ 2.40 ಕಿ.ಮೀ (1.4 ಕಿ.ಮೀ ಡಾಂಬರೀಕರಣ ಮತ್ತು 1.00 ಕಿ.ಮೀ ಮರು ಡಾಂಬರೀಕರಣ) ಕೆಲಸವನ್ನು ಕೈಕೊಳ್ಳಲಾಗಿದೆ. ಮತ್ತು ಬಯಲು ಸೀಮೆ ಅಭಿವೃದ್ಧಿ ಕಾರ್ಯಕ್ರಮ ಅಡಿಯಲ್ಲಿ ಕಾತರಕಿ ಆಲಗುಂಡಿ ರಸ್ತೆಯ ಆಯ್ದ ಜಾಗಗಳಲ್ಲಿ ಸುಧಾರಣೆ ಹಾಗೂ ಮರುಡಾಂಬರೀಕರಣ ಮಾಡಲು 5.00 ಲಕ್ಷ ರೂ.ಗಳ ಅಂದಾಜು ಪತ್ರಿಕೆಯನ್ನು ತಯಾರಿಸಿ ಆಡಳಿತ್ಮಾಕ ಮಂಜೂರಾತಿಗಾಗಿ ಬಯಲು ಸೀಮೆ ಪ್ರಾಧಿಕಾರ ಚಿತ್ರದುರ್ಗ ಇವರಿಗೆ ಸಲ್ಲಿಸಲಾಗಿದೆ. ಅಂದಾಜು ಪತ್ರಿಕೆಗೆ ಮಂಜುರಾತಿ ದೊರೆತ ಕೂಡಲೇ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಈ ರಸ್ತೆಯ ಮೇಲೆ 20.00 ಲಕ್ಷ ರೂ. ಕಾರ್ಯಕ್ರಮದ ಅಡಿಯಲ್ಲಿ 3.00 ಕಿ.ಮೀ. ಬೀಳಗಿ ಪಟ್ಟಣ ಪರಿಮಿತಿಯಲ್ಲಿ ರಸ್ತೆಯನ್ನು ಅಗಲಗೊಳಿಸಿ ಡಾಂಬರೀಕರಣ ಮಾಡಲಾಗಿದೆ. ಹಾಗೂ ಕಿ.ಮಿ. 22.0 ರಿಂದ 31.50 ರ ಆಯ್ದ ಭಾಗಗಳಲಿ ರಸ್ತೆಯನ್ನು ಅಗಲಗೊಳಿಸಲಾಗಿದೆ. ಹಾಗೂ ಕಿ.ಮೀ 6.00 ರಿಂದ 8.00 ವರೆಗೆ ಮರು ಡಾಂಬರೀಕರಣ ಮಾಡಲಾಗಿದೆ. ಇದು ಅಲ್ಲದೇ ಕೇಂದ್ರ ರಸ್ತೆ ನಿಧಿಯ ಅಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ ವಿಭಾಗ ವಿಜಾಪುರ ಇವರು ಬೀಳಗಿಯಿಂದ ಯಡಹಳ್ಳಿವರೆಗೆ ಮರು ಡಾಂಬರೀಕರಣ ಮಾಡುವ ಕೆಲಸಕ್ಕೆ ಗುತ್ತಿಗೆಯನ್ನು ಒಪ್ಪಿರುತ್ತಾರೆ.

ಇ) 1998-99 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಬಹುದಾದ ಅನುದಾನಕ್ಕೆ ತಕ್ಕಂತೆ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಲಾಗುವುದು.

ಬೀಳಗಿ ಕ್ಷೇತ್ರದಲ್ಲಿ ಮೀನುಗಾರಿಕೆ ಅಭಿವೃದ್ಧಿ

205 (473) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ